248(552) ಶ್ರೀ ವಾಟಾಳ್ ನಾಗರಾಜ್

ಮಾನ್ಯ ಆಹಾರ ಮತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಅಡುಗೆ ಅನಿಲ ವಿತರಕರ (ಗ್ಯಾಸ್ ಏಜೆನ್ಸಿಗಳ) ಸಂಖ್ಯೆ ಎಷ್ಟು?

ಆ) ಅಡುಗೆ ಅನಿಲವು ಅರ್ಹ ಫಲಾನುಭವಿಗಳಿಗೆ ಸಮರ್ಪಪಕವಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಗೋವಿಂದ ಎಂ ಕಾರಜೋಳ

ಅ) ರಾಜ್ಯದಲ್ಲಿ ಒಟ್ಟು 489 ಅಡುಗೆ ಅನಿಲ ವಿತರಕರು ಇರುತ್ತಾರೆ ತೈಲ ಕಂಪೆನಿವಾರು ವಿವರ ಈ ಕೆಳಕಂಡಂತಿದೆ

ಇಂಡಿಯನ್ ಆಯಿಲ್ ಕಾರ್ಪೊರೇಷನ್	215
ಭಾರತ್ ಪಡೆಟ್ರೋಲಿಯಮ್ ಕಾರ್ಪೊರೇಷನ್	112
ಹಿಂದುಸ್ಥಾನ್ ಪೆಟ್ರೋಲಿಯಮ್ ಕಾರ್ಪೊರೇಷನ್	162
ಒಟ್ಟು	**489**

ಆ) ಬಂದಿದೆ 2006-07 ಮನೇ ಸಾಲಿನಲ್ಲಿ ಮತ್ತು ದಿ 1-4-07 ರಿಮದ 30-06-07 ರ ಅವಧಿಯಲ್ಲಿ ರಾಜ್ಯದಾದ್ಯಂತ ತೈಲ ಕಂಪೆನುವಾರು ಅಡುಗೆ ಅನಿಲದ ಬೇಡಿಕೆ ಮತ್ತು ಸರಬರಾಜುಗಳ ವಿವರ ಈ ಕೆಳಕಂಡಂತಿರುತ್ತದೆ

ಮೆ ಟನ್‌ಗಳಲ್ಲಿ

	2006–07		2007–08 (ದಿ 1–04–07 ರಿಂದ 30–06–2007	
ತೈಲಕಂಪೆನಿ	ಬೇಡಿಕೆ	ಸರಬರಾಜು	ಬೇಡಿಕೆ	ಸರಬರಾಜು
ಐ ಒ ಸಿ	235959	235959	58761	58761
ಬಿ ಪಿ ಸಿ	137677	137677	33389	33389
ಹೆಚ್ ಪಿ ಸಿ	215186	215186	50019	49519
ಒಟ್ಟು	**588827**	**588822**	**142169**	**141669**

(14 2 ಕೆಜಿಯ ಅಂದಾಜು 70 ಸಿಲಿಂಡರ್‌ಗಳು 1 ಮೆ ಟನ್ನಿಗೆ ಸಮ)

ಮೇಲ್ಕಂಡಂತೆ 2006–07 ನೇ ಸಾಲಿನಲ್ಲಿ ಅಡುಗೆ ಅನಿಲವು ಬೇಡಿಕೆಗನುಗುಣವಾಗಿ ಸರಬರಾಜು ಆಗಿರುತ್ತದೆ ಅಲಲ್ಲದೇ ಐ ಒ ಸಿ ಮತ್ತು ಬಿ ಪಿ ಒ ತೈಲ ಕಂಪೆನುಗಳಿಂದ 1–4–2007 ರಿಂದ 30–06–07 ರ ಅವಧಿಯಲ್ಲಿಯೂ ಸಹ ಅಡುಗೆ ಅನಿಲವು ಬೇಡಿಕೆಗೆ ಅನುಗುಣವಾಗಿ ಸರಬರಾಜು ಆಗಿರುತ್ತದೆ

ಆದರೆ, ಈ ಅವಧಿಯಲ್ಲಿ ಬೆಂಗಳೂರು ನಗರಕ್ಕೆ ಸಂಬಂದಿಸಿದಂತೆ ಹೆಚ್ ಪಿ ಸಿ ತೈಲ ಕಂಪೆನಿ ವತಿಯಿಂದ ದಿ 1–4–2007 ರಿಂದ 30–06–07 ರ ಅಂತ್ಯಕ್ಕೆ ಸುಮಾರು 500 ಮೆ ಅನ್ಗಳ ಅಡುಗೆ ಅನಿಲದ ಸರಬರಾಜಿನ್ಲಲೊ ವ್ಯತ್ಯಯ ಉಂಟಾಗಿರುತ್ತದೆ ಈ ಹಿಂದೆ, ಹೆಚ್ ಪಿ ಸಿ ಯಿಂದ ಅವರ ಬೆಂಗಳೂರಿನಲ್ಲಿರುವ ಅಡುಗೆ ಅನಿಲ ಸ್ಥಾವರಕ್ಕೆ ಪ್ರತಿನಿತ್ಯ ಸುಮಾರು 15 ಟ್ಯಾಶಂಕ್ರ್‌ಗಳ ಮೂಲಕ ಪೂರ್ಣ ಪ್ರಮಾಣದಲ್ಲಿ ಅಡುಗೆ ಅನಿಲವು ಮಂಗಳೂರನಿಂದ ಶಿಎಆಡಿ ಘಾಟ್ ರ್ಸತೆ ಮೂಲಕವೇ ಬೆಂಗಳೂರು ನಗರಕ್ಕೆ ಸರಬರಾಜು ಆಗುತ್ತಿದ್ದು, ಇತ್ತೀಚೆಗೆ ಶಿರಾಡಿ ಘಾಟ್ ರಸ್ತೆಯಯ ಸಂಪೂರ್ಣವಾಗಿ ಹದಗೆಟ್ಟು ಬಂದ್ ಮಾಡಿರುವುದರಿಂದ ದಿನಾಂಕ 26–07–2007 ರಿಂದ 30–06–2007 ರ ಅವಧಿಯಲ್ಲಿ ಅಡುಗೆ ಅನಿಲದ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ ಅಡುಗೆ ಅನಿಲ ಗ್ರಾಹಕರ ಹಿತದೃಷ್ಟಿಯಿಂದ ತಕ್ಷಣವೇ ಈ ಬಗ್ಗೆ ಸದರಿ ಕಂಪೆನಿಯವರು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ

1) ಶಿರಾಡಿ ಘಾಟ್ ರ್ಸ್ತೆ ಸಂಪೂರ್ಣ ಬಂದ್ ಆಗಿರುವುದರಿಂದ ಅಡುಗೆ ಅನಿಲದ ಟ್ಯಾಂಕರ್‌ಗಳನ್ನು ಮಂಗಳೂರಿನಿಂದ ಹುಬ್ಬಳ್ಳಿ ನಗರದ ಮೂಲಕ ಹೆಚ್ಚಿನ ದೂರದ ರಸ್ತೆಯಲ್ಲಿ ಹಾಗೂ ಹೆಚ್ಚುವರಿ ವೆಚ್ಚ ಭರಿಸಿ ಬೆಂಗಳೂರಿಗೆ ಸಾಗಾಣಿಕೆ ಮಾಡಲಾಗುತ್ತಿವೆ

2) ರಾತ್ರಿ ಪಾಳಿಯಲ್ಲಿ ಸಹ ತೈಲ ಕಂಪೆನಿಯಲ್ಲಿ ಬೆಂಗಳೂರಿನ ಆಡುಗೆ ಅನಿಲ ಸ್ಥಾವರ ಕಾರ್ಯ ನಿರ್ವಹಿಸುತ್ತಿದೆ

3) ಭಾನುವಾರದ ರಜಾ ದಿನದಲ್ಲೂ ಸಹ ಕಾರ್ಯ ನಿರ್ವಹಿಸಲು ಕ್ರಮವಿಡಲಾಗಿದೆ

ಮೇಲ್ಕಂಡ ಕ್ರಮದಿಂದಾಗಿ ದಿನಾಂಕ 7–7–07 ರ ಅಂತ್ಯಕ್ಕೆ ವ್ಯತ್ಯಯವನ್ನು ಈ ಹಿಂದೆ ಇದ್ದ 500 ಮೆ ಟನ್‌ಗಳಿಂದ 300 ಮೆ ಟನ್‌ಗಳಿಗೆ ಇಳಿಸಲಾಗಿದೆ ಅಂತಿಮವಾಗಿ ದಿನಾಂಕ 10–07–07 ರಂದು ಫ್ಯಾಕ್ಸ್ ಸಂದೇಶ ನೀಡಿ ಪೂರ್ಣ ಬೇಡಿಕೆಗೆ ಅನುಸಾರ ಅಡುಗೆ ಅನಿಲವನ್ನು ಯಾವುದೇ ವ್ಯತ್ಯಯವಿಲ್ಲದೇ ಸರಬರಾಜು ಮಾಡಿರುವುದಾಗಿ ಸದರಿ ತೈಲ ಕಂಪೆನಿಯವರು ವರದಿ ಮಾಡಿರುತ್ತಾರೆ